ಪ್ರೀತಿಯ ನಯಾಸ್,

ನನ್ನ ಜೀವನದಲ್ಲಿ ಈ ರೀತಿ ಹೀಗೆ ನಿನಗೆ ನಾನು ಪತ್ರವನ್ನು ಬರೆಯಬಲ್ಲೆ ಅಥವಾ ವಾಸ್ತವವಾಗಿ ಬರೆಯುತ್ತಿದ್ದೇನೆ ಎಂಬುದೇ ಅತ್ಯಂತ ಆಶ್ಚರ್ಯಕರವಾದ ವಿಷಯ. ಆದರೆ, ವೈಯುಕ್ತಿಕತೆ ಸಾರ್ವಜನಿಕವಾಗುತ್ತಿರುವ ಮತ್ತು ರಾಜಕೀಕರಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ವೈಯುಕ್ತಿಕ ನೆಲೆಯ ನನ್ನ ಅನುಭವವನ್ನು ಸಾರ್ವತ್ರಿಕಗೊಳಿಸಬೇಕಾದುದು ಅತ್ಯಂತ ಅವಶ್ಯಕ ಮತ್ತು ಅನಿವಾರ್ಯ ಎಂದು ನಾನಾದರೂ ಭಾವಿಸಿದ್ದರಿಂದ ಈ ವಿಷಯವನ್ನು ನಿನ್ನೊಡನೆ ಜರೂರು ಪ್ರಸ್ತಾಪ ಮಾಡಬೇಕಿದೆ. ನಿನ್ನನ್ನು ಸೇರಿದಂತೆ ಈ ವಿಷಯಕ್ಕೆ ಸಂಬಂಧಪಟ್ಟವರು ಅಂದರೆ ನಿನ್ನಂತಹ ಪುರುಷರು ಎಲ್ಲೆಲ್ಲಿ ಮುಟ್ಟಿ ನೋಡಿಕೊಳ್ಳುವರು ಎಂಬುದು ನನಗೆ ತಿಳಿಯದು. ಏಕೆಂದರೆ, ಸಾವಿರಾರು ವರ್ಷಗಳಿಂದ ಮೌನದ ಮಹತ್ವವನ್ನು ನನ್ನಂತಹವರಿಗೆ ಮಾತ್ರ ಮನಗಾಣಿಸಿ ನಮ್ಮ ತುಟಿಗಳನ್ನು ನಮ್ಮ ಕೈಯಲ್ಲೇ ಹೊಲಿಸಿ ಅದರಿಂದ ಸ್ರವಿಸುವ ರಕ್ತವು ನಮ್ಮ ನಾಲಿಗೆಯನ್ನು ಉಪ್ಪುಪ್ಪಾಗಿಸಿದರೂ ನಮ್ಮ ತುಟಿಗಳ ವ್ರಣಗಳು ಎಂದೆಂದಿಗೂ ಮಾಯದಂತೆ ಮತ್ತು ಹಸಿ ಗಾಯಗಳಾಗಿರುವಂತೆ ವ್ಯವಸ್ಥಿತವಾಗಿ ನೋಡಿಕೊಂಡ ನಿಮ್ಮ ಹುನ್ನಾರಗಳಿಗೆ ನನ್ನದೊಂದು ಸಲಾಂ.

ಮೈದಾನವು ನಿಮ್ಮದೇ; ಚೆಂಡು ಕೂಡ ನಿಮ್ಮದೇ! ಆಟದಲ್ಲಿ ಓಡುವವರು ಹಾಗೂ ಓಡಿಸುವವರು ನೀವೇ. ಗೋಲ್‌ಕೀಪರ್ ನಿಮ್ಮವನೇ. ರೆಫರಿಯೂ ನಿಮ್ಮವನೇ. ಕೊನೆಗೆ ಪ್ರೇಕ್ಷಕರನ್ನಾಗಿಯೂ ನಮ್ಮನ್ನು ಒಳ ಸೇರಿಸಲಿಲ್ಲ, ಒಳಗೊಳ್ಳಲಿಲ್ಲ. ಹೀಗಾಗಿ ಎಂದೆಂದಿಗೂ ಗೆಲುವು ನಿಮ್ಮದೇ. ಆದರೆ, ಇದೇ ಪರಿಸ್ಥಿತಿ ಮುಂದುವರೆಯುವುದಿಲ್ಲ ಮತ್ತು ಆಟದ ನಿಯಮಗಳು ಬದಲಾಗುತ್ತವೆ ಎಂಬುದು ನಿಮಗೆ ತಿಳಿಯಲಿಲ್ಲವೆ? ನಿಮ್ಮ ಆದೇಶದ ರೀತ್ಯ ಪಾತ್ರನಿರ್ವಹಣೆ ಮಾಡುತ್ತಾ ಕೊನೆಗೂ ಆಟದ ಕೆಲವು ರಹಸ್ಯಗಳನ್ನು ನಾವು ಕೂಡ ತಿಳಿಯಬಹುದು ಎಂಬ ಮುನ್ನೆಚ್ಚರಿಕೆ ನಿಮ್ಮಲ್ಲಿ ಮೂಡಲಿಲ್ಲವೇ?

ಇಷ್ಟೆಲ್ಲಾ ಪೀಠಿಕೆ ಯಾಕೆ ಬೇಕಾಯಿತೆಂದರೆ ಒಂದು ಕಾಲದಲ್ಲಿ ನೀನು ನನ್ನ ಮಂಗೇತರ್ ಆಗಿದ್ದೆ. ನನ್ನ ತಾಯಿಯ ಕಿರಿಯ ತಂಗಿ ನಿನ್ನ ತಂದೆಯ ತಮ್ಮನಾದ ಅಕ್ಮಲ್ ಪಾಶಾನ ಹೆಂಡತಿಯಾಗಿದ್ದಳು. ಅವರ ಗೃಹ ಪ್ರವೇಶಕ್ಕೆ ನಮ್ಮ ಕುಟುಂಬ ಹೋಗಿದ್ದರೂ ನಾನು ಆ ಹೊಸ ಮನೆಯ ಮಹಡಿಯಲ್ಲಿದ್ದ ಒಂದು ಕೋಣೆಯಲ್ಲಿ ನನ್ನ ಪಠ್ಯಪುಸ್ತಕಗಳೊಡನೆ ತಲ್ಲೀನಳಾಗಿದ್ದೆ. ನನ್ನ ಪರೀಕ್ಷೆ ಸಮೀಪವಿತ್ತು.

ಒಂದೆರಡು ಬಾರಿ ನೀನು ತೆರೆದಿದ್ದ ಕಿಟಕಿಯ ಸಂದಿಯಿಂದಲೋ ಬಾಗಿಲ ಸಂದಿಯಿಂದಲೋ ನನ್ನನ್ನು ಇಣುಕಿ ನೋಡುತ್ತಾ ಠಳಾಯಿಸಿದ್ದೆ. ಏಕೆಂದರೆ, ನನಗೆ ಹಾಗೆ ಅನಿಸಿತು. ಮತ್ತು ಕೆಲ ಹೊತ್ತಿನ ನಂತರ ಒಮ್ಮೆಲೆ ಧಡಾರ್ ಎಂದು ಬಾಗಿಲನ್ನು ತೆರೆದುಕೊಂಡು ನೀನು ನಿನ್ನ ತಾಯಿಯೊಡನೆ ಕೋಣೆಯೊಳಗೆ ಬಂದದ್ದು ಕೂಡ ಆಕಸ್ಮಿಕವೇನಲ್ಲ. ನೀನೇ ಚಿತಾವಣೆ ಮಾಡಿ ಸುರಯ್ಯ ಆಂಟಿಯನ್ನು ಎಳೆದುಕೊಂಡು ಅಲ್ಲಿಗೆ ಬಂದಿದ್ದೆ ಎಂದು ತಿಳಿಯಲು ನಾನು ಅಪಾರ ಶ್ರಮ ಪಡಬೇಕಿರಲಿಲ್ಲ. ಏಕೆಂದರೆ, ಇಂತಹ ವಿಷಯಗಳು ಹೆಣ್ಣುಮಕ್ಕಳಿಗೆ ಬಹಳ ಬೇಗ ಅರ್ಥವಾಗಿ ಬಿಡುತ್ತವೆ; ಅವರು ಎಷ್ಟೇ ಚಿಕ್ಕವರಿದ್ದರೂ. ಬಹುಶಃ ಆಗ ನಾನು ಒಂಬತ್ತನೇ ತರಗತಿಯ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ ಎಂದೆನಿಸುತ್ತದೆ. ನೀನು ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದೆ.

ಮುಸ್ಲಿಂ ಸಮುದಾಯದಲ್ಲಿ ಇಂದಿಗೂ ಕೆಲವರು ಪಾಲಿಸುತ್ತಿರುವ ಸಂಪ್ರದಾಯ ಒಂದಿದೆ. ಅದೆಂದರೆ ತಮ್ಮ ಗಂಡು ಮಕ್ಕಳಿಗೆ ಹೆಣ್ಣನ್ನು ತಮ್ಮ ಗುರುತು ಪರಿಚಯ ಮತ್ತು ನೆಂಟಸ್ತನ ಇರುವಂತಹ ಮನೆತನದಲ್ಲಿಯೇ ಹುಡುಕುವುದು. ಹೀಗಾಗಿ 'ದೇಖಿ ದಿಖಾಯಿ' ಮನೆತನದ ಮತ್ತು ಬಿರಾದರಿಯ ಹುಡುಗಿ ಸಿಗಬೇಕಾದರೆ ಇಂತಹ ಸಭೆ ಸಮಾರಂಭಗಳಲ್ಲಿ ಬರುವ ಹೆಣ್ಣುಮಕ್ಕಳ ಮೇಲೆ ಆರಂಭದಿಂದಲೇ ಕಣ್ಣಿಟ್ಟು ಸೂಕ್ತ ವಧುವನ್ನು ಆಯ್ಕೆ ಮಾಡಿಕೊಳ್ಳುವುದು. ಇದು ಬಹುತೇಕ